ಜಜಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

---

**ಸಂಖ್ಯೆ : ವಾಇ : ಉ ನಿ : ಸುಮಪ : 2018–19** **ದಿನಾಂಕ: 15–02–2019**

<u>ಪತ್ರಿಕಾ ಆಮಂತ್ರಣ</u>

1. <u>ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವತಿಯಿಂದ "ಮನೆಯಂಗಳದಲ್ಲಿ ಮಾತುಕತೆ" ಕಾರ್ಯಕ್ರಮ:</u>

**<u>ತಿಂಗಳ ಅತಿಥಿ:</u>**
ಶ್ರೀಮತಿ ಮಾಲತಿ ಹೊಳ್ಳ,
ಅಂತರಾಷ್ಟ್ರೀಯ ಕ್ರೀಡಾಪಟು ಹಾಗೂ ಸಮಾಜ ಸೇವಕಿ

ದಿನಾಂಕ: 16–02–2019, ಶನಿವಾರ ಸಮಯ: ಸಂಜೆ : 4–00 ಗಂಟೆಗೆ

ಸ್ಥಳ : ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.

2. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವತಿಯಿಂದ ತಿಂಗಳ ಕಾರ್ಯಕ್ರಮ

**<u>ಪ್ರಸ್ತಾವನೆ:</u>**
ಎಚ್. ದಂಡಪ್ಪ,
ವಿಮರ್ಶಕರು
**<u>ಉಪನ್ಯಾಸ:</u>**
ಡಾ. ಅರವಿಂದ ಮಾಲಗತ್ತಿ, ಖ್ಯಾತ ಸಾಹಿತಿಗಳು ಹಾಗೂ
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ
ದಿನಾಂಕ: 16–02–2019, ಶನಿವಾರ ಸಮಯ: ಸಂಜೆ : 5–30 ಗಂಟೆಗೆ

ಸ್ಥಳ : ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಚೇರಿ ಆವರಣ, ಮಲ್ಲತ್ತಹಳ್ಳಿ, ಕಲಾಗ್ರಾಮ, ಬೆಂಗಳೂರು.

<u>ಪತ್ರಿಕಾ ಪ್ರಕಟಣೆ</u>

## “ಮನೆಯಂಗಳದಲ್ಲಿ ಮಾತುಕತೆ” ಕಾರ್ಯಕ್ರಮ
## ತಿಂಗಳ ಅತಿಥಿಯಾಗಿ ಮಾಲತಿ ಹೊಳ್ಳ

ಬೆಂಗಳೂರು, ಫೆಬ್ರವರಿ 15 (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖಾವತಿಯಿಂದ ದಿನಾಂಕ: 16–02–2019 ರ ಶನಿವಾರದಂದು ಸಂಜೆ 4–00 ಗಂಟೆಗೆ ನಗರದ ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು ಇಲ್ಲಿ ಹಮ್ಮಿಕೊಂಡಿರುವ "ಮನೆಯಂಗಳದಲ್ಲಿ ಮಾತುಕತೆ" ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಅಂತರಾಷ್ಟ್ರೀಯ ಕ್ರೀಡಾಪಟು ಹಾಗೂ ಸಮಾಜ ಸೇವಕಿಯಾದ ಶ್ರೀಮತಿ ಮಾಲತಿ ಹೊಳ್ಳ ಅವರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಅರ್ಜಿ ಆಹ್ವಾನ

ಬೆಂಗಳೂರು, ಫೆಬ್ರವರಿ 15 (ಕರ್ನಾಟಕ ವಾರ್ತೆ)

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ ಹಾಗೂ ವಿಶ್ವವಿದ್ಯಾಲಯದ ಅಧೀನಕ್ಕೊಳಪಡುವ ಸ್ನಾತಕೋತ್ತರ ಕೇಂದ್ರ, ಕೋಲಾರದ ಸ್ನಾತಕೋತ್ತರ ವಿಭಾಗಗಳಿಗೆ 2019ನೇ ಸಾಲಿನ ಸ್ನಾತಕೋತ್ತರ ಬೋಧನಾ ಕಾರ್ಯಭಾರದ ನಿರ್ವಹಣೆಗಾಗಿ ಯುಜಿಸಿ ನಿಯಮಾನುಸಾರ ಪೂರ್ಣಕಾಲಿಕ/ಅರೆಕಾಲಿಕ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆಯಲು ಈ ಕೆಳಕಂಡ ವಿಷಯಗಳ ಬೋಧನಾ ಕಾರ್ಯಭಾರಕ್ಕನುಗಣವಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

1. ಎಂ.ಎ. ಕನ್ನಡ 2. ಎಂ.ಕಾಂ. ಮತ್ತು 3 ಎಂ.ಎಸ್ಸಿ. ಗಣಿತಶಾಸ್ತ್ರ.

ಈ ಹುದ್ದೆಗಳು ಸಂಪೂರ್ಣ ತಾತ್ಕಾಲಿಕವಾಗಿರುತ್ತದೆ._ಆಯ್ಕೆಯಾದ ಅತಿಥಿ ಉಪನ್ಯಾಸಕರ ಸಂಭಾವನೆಯನ್ನು ವಿಶ್ವದ್ಯಾಲಯದ ನಿಯಮಾನುಸಾರ ನೀಡಲಾಗುವುದು._ವಿವಿಧ ವಿಷಯಗಳ ಕಾರ್ಯಭಾರ ಅಗತ್ಯತೆಗನುಗುಣವಾಗಿ ಹಾಗೂ ಸಧ್ಯದಲ್ಲಿ ಜಾರಿಯಲ್ಲಿರುವ ಸರ್ಕಾರದ

ಮೀಸಲಾತಿ ನಿಯಮಗಳಿಗೆ ಅನುಗುಣವಾಗಿ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗುವುದು.

ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ http://bnu.ac.in ದಿಂದ ಡೌನಲೋಡ್ ಮಾಡಿಕೊಂಡು ಭರ್ತಿಮಾಡಿದ ಅರ್ಜಿಗಳನ್ನು ಕುಲಸಚಿವರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ (ಆಡಳಿತ ಕಚೇರಿ), ಶ್ರೀ ದೇವರಾಜು ಅರಸು ಬಡಾವಣೆ, ಟಮಕ, ಕೋಲಾರ – 563 103, ಅಥವಾ ಕುಲಸಚಿವರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ (ನಗರ ಕಚೇರಿ), ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಅರಮನೆ ರಸ್ತೆ, ಬೆಂಗಳೂರು –560 001 ಇಲ್ಲಿಗೆ ದಿನಾಂಕ: 23–02–2019 ಸಾಯಂಕಾಲ 5.00 ಗಂಟೆಯವರೆಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಪ್ರತ್ಯೇಕ ಪತ್ರಗಳನ್ನು ಕಳುಹಿಸುವುದಿಲ್ಲ. ಸಂದರ್ಶನ ದಿನಾಂಕ ಮತ್ತು ಇತರೆ ಮಾಹಿತಿಗಳಿಗೆ ವಿಶ್ವವಿದ್ಯಾಲಯದ ವೆಬ್‌ಸೈಟ್ htpp://bnu.ac.in ನ್ನು ಗಮನಿಸಬಹುದು. ಹೆಚ್ಚಿನ ಮಾಹಿತಿಗೆ ದೂರವಾಣಿ 08152–243152/53, 080–22237766/22237222/22961294 ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# Application Invited

Bengaluru, Feb 15 (Karnataka Information)

Applications are invited for the appointment of Guest Faculty (Full time/Part time) for the following PG Courses offered at Bengaluru North University and PG Centre, Kolar for the academic year 2019.

1. M.A. in Kannada.
2. M.Com and
3. M.Sc in Mathematics

The applicants must possess Post-Graduate Degree in the concern subject with Ph.D/M.Phil/NET/SLET. Application format can be downloaded from the University website and the filled in application

form with all the necessary testimonials such as Marks Cards, Degree Certificates, Experience Certificates NET/SLET Certificates, Research Publications etc., may be submitted to : The Registrar, Bengaluru North University (Administrative Office), Sri Devraj Urs Extension, Tamaka, Kolar - 563 103 (OR) The Registrar, Bengaluru North University (City Office), Jnana Jyothi Auditorium, Central College Campus, Palace Road, Bengaluru- 560 001 on or before 23rd February, 2019 before 5.00 P.M.

Note:

1. The posts are purely temporary.
2. The selected Guest Faculty would be provided with suitable honorarium as per the University norms.
3. Depending upon the work load on various subjects and as per reservation policy of Government of Karnataka appointments would be made.

The details of date of interview and other information can be obtained from the University website http://bnu.ac.in any clarification in this regard may be obtained from the following Telephone numbers: 08152-243152/53, City office: 080-22237766/22237222 and 22961294 says an official Press Release.

## ಅಂತಿಮ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಫೆಬ್ರವರಿ 15 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿನ ಮಹಿಳಾ ಮೇಲ್ವಿಚಾರಕಿಯರ 643 (86 + 557) ಹುದ್ದೆಗಳ ಅಂತಿಮ ಆಯ್ಕೆಪಟ್ಟಿಯನ್ನು ದಿನಾಂಕ: 08–02–2019 ರಂದು ಆಯೋಗದ ಅಂತರ್ಜಾಲ ತಾಣ http://kpsc.kar.nic.in. ದಲ್ಲಿ

ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

## ಫಲಾನುಭವಿಗಳ ಖಾತೆಗೆ ಹಣ ಬಿಡುಗಡೆ

ಬೆಂಗಳೂರು, ಫೆಬ್ರವರಿ 15 (ಕರ್ನಾಟಕ ವಾರ್ತೆ)

ಸರ್ಕಾರದ ವಿವಿಧ ವಸತಿ ಯೋಜನೆಗಳಾದ ಬಸವ ವಸತಿ ಯೋಜನೆ , ಡಾ ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ, ದೇವರಾಜ ಅರಸು ವಸತಿ (ವಿಶೇಷ ವರ್ಗದವರಿಗೆ) ಯೋಜನೆ, ಪ್ರಧಾನ ಮಂತ್ರಿ ಆವಾಸ್ (ಗ್ರಾ) ಹಾಗೂ ವಾಜಪೇಯಿ ನಗರದ ವಸತಿ ಯೋಜನೆಗಳಡಿ ಮನೆಗಳ ನಿರ್ಮಾಣದ ವಿವಿಧ ಹಂತಗಳ ಜಿ.ಪಿ.ಎಸ್. ಪ್ರತಿಗನುಗುಣವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಅನುದಾನವನ್ನು ದಿನಾಂಕ: 14-02-2019 ರಂದು ಬಿಡುಗಡೆ ಮಾಡಲಾಗಿದೆ.

ಬಸವ ವಸತಿ ಯೋಜನೆಯ 99,762 ಫಲಾನುಭವಿಗಳಿಗೆ 262.84 ಕೋಟಿ ರೂ. ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯ 69,898 ಫಲಾನುಭವಿಗಳಿಗೆ 240.76 ಕೋಟಿ. ರೂ. ದೇವರಾಜ ಅರಸು ವಸತಿ (ವಿಶೇಷ ವರ್ಗದವರಿಗೆ) ಯೋಜನೆಯ 785 ಫಲಾನುಭವಿಗಳಿಗೆ 3.08 ಕೋಟಿ ರೂ, ಪ್ರಧಾನ ಮಂತ್ರಿ ಆವಾಸ್ (ಗ್ರಾ) ಯೋಜನೆಯ 6732 ಫಲಾನುಭವಿಗಳಿಗೆ 19.42 ಕೋಟಿ ರೂ. ಹಾಗೂ ವಾಜಪೇಯಿ ನಗರ ವಸತಿ ಯೋಜನೆಯ 3153 ಫಲಾನುಭವಿಗಳಿಗೆ 7.73 ಕೋಟಿ ರೂ. ಬಿಡುಗಡೆ ಮಾಡಲಾಗಿದ್ದು, ಒಟ್ಟು 1,80,330 ಫಲಾನುಭವಿಗಳಿಗೆ 533.83 ಕೋಟಿ ರೂ. ಗಳನ್ನು ಬಿಡುಗಡೆಮಾಡಲಾಗಿದೆ.

ಹೆಚ್ಚಿನ ಮಾಹಿತಿಗೆ ನಿಗಮದ ವೆಬ್‌ಸೈಟ್ https://ashraya.karnataka.gov.in ನೋಡಬಹುದಾಗಿದೆ ಎಂದು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಪ್ರಕಟಣೆ ತಿಳಿಸಿದೆ.